ದೇವರೆಡ್ಡಿಯ ಕಡೆಗೇ ನೋಡುತ್ತಲಿದ್ದ. ಅವನ ಬೆನ್ನು ಮನೆಯಿಂದ ಆಚೆ ನಡೆದ ಕೆಲವು ಕ್ಷಣಗಳಲ್ಲಿ ಮರೆಯಾಯಿತು. ಆದರೂ ಅವನ ವಿಶಾಲವಾದ ಬೆನ್ನು ಗಂಗಿರೆಡ್ಡಿಯ ಕಂಗಳಲ್ಲಿ ಸ್ತಬ್ಧಚಿತ್ರದಂತೆ ಬಹಳ ಹೊತ್ತು ನಿಂತುಬಿಟ್ಟಿತು. ಸ್ವಲ್ಪ ಹೊತ್ತು ಹಾಗೇ ನಿಂತಿದ್ದ ಅವನು ನಂತರ 'ಇಂತೆಂದು ವಿಕ್ರಮರಾಜನು ಏನೆಂದು ಪೇಳುತ್ತಿರ್ದಾರೆನೆದೆಂತನೇ...' ಎಂದು ಗಟ್ಟಿಯಾಗಿ ಹಾಡತೊಡಗಿದ. ಅಷ್ಟರಲ್ಲಿ ಅವನ ಅತ್ತಿಗೆ 'ಆ ಹಾಳಾದ್ನ ನಿಲ್ಲುಸಿ ಏನಾರ ಪಂಗ ಇದ್ರೆ ಮಾಡೇಳು. ಆ ಶನಿ ನಿನ್ನಿಂದ್ಲೆ ನಮ್ಮನಿ ವೊಕ್ಕಂಗಾಗೈತಿ' ಎಂದು ಗದರಿದಳು. ಗಂಗಿರೆಡ್ಡಿ ಅತ್ತಿಗೆಯನ್ನು ದಿಟ್ಟಿಸಿದ. ಎಂದಿನ ಅದೇ ತಲೆ ತಗ್ಗಿಸಿ ನಿಂತ ದೇಹ. ಅಡುಗೆ ಮನೆಯ ಹೊಗೆಯ ಕಾರಣವಾಗಿಯೆ ಕಪ್ಪಗೆ ಕಾಣುತ್ತಿದ್ದಾಳೇನೋ ಎಂದನಿಸುವ ಹಾಗೆ ನಿಂತಿದ್ದಳು. ಗಂಗಿರೆಡ್ಡಿ ಹಾಗೆ ನೋಡುತ್ತಲೇ 'ಅದುಕೆ ಈ ಸಲೀಕೆ ಶ್ರಾವಣದ ಕೊನೇ ಶನಿವಾರ ಶನಿಮಹಾತ್ಮೆ ಕತಿ ಮಾಡಿಸಕ್ಕೇಳು ನಿನ ಗಂಡನುಕೆ. ಆಗ ನಮ್ಮನಿ ಮೇಕೆ ಶನಿಮಾತ್ಮನ ಕೆಟ್ಟ ಸೂಪು ತೊಲಗಿ ಒಳ್ಳೆ ಸೂಪು ಬೀಳುತ್ತೆ. ವಚ್ನ ವೋದೋದು ಕತಿ ಯೇಳೋದು ಎಲ್ಲಾ ನಾನೇ ಮಾಡ್ತೀನಿ' ಎಂದು ನುಡಿದು ಅವಳ ಪ್ರತಿಕ್ರಿಯೆಗಾಗಿ ಕಾಯತೊಡಗಿದ. ಅವಳು 'ಈ ಮನಿನಾಗ ನಂದ್ಯಾವಾಗ ನಡಿದೈತಿ? ಶನಿಮಾತ್ಮ ನಾ ವುಟ್ಟಿದಾಗಿಂದ್ಲೆ ನನ ತಲಿಮ್ಯಾಗ ಕೂತವುನೆ. ವೋಗಿ ನಿಮ್ಮಣ್ಣನುಕೆ ಕೇಳು' ಎಂದು ನುಡಿದು ಅಡುಗೆ ಮನೆಗೆ ನಡೆದಳು.

ಏನಾದ್ರು ಮಾಡಿ ಈ ಬಾರಿ ಶನಿಮಹಾತ್ಮೆ ಕಥೆಯನ್ನು ಮಾಡಿಸಲು ದೇವರೆಡ್ಡಿಯನ್ನು ಒಪ್ಪಿಸಬೇಕು ಮತ್ತು ತನ್ನ ಕಥೆಯನ್ನು ಕೇಳಲು ಬೆಂಗಳೂರಿನಲ್ಲಿ ಕೆಲಸ ಮಾಡುತ್ತಿರುವ ಅವನ ಮಕ್ಕಳನ್ನೂ ಕರೆಸಬೇಕು ಎಂದುಕೊಂಡು ಅಲ್ಲೆ ಗೋಡೆ ಬದಿಗಿರುವ ದಿವಾನದ ಮೇಲೆ ಕುಳಿತುಕೊಂಡ. ಒಂದು ಬಾರಿ ದೇವರೆಡ್ಡಿಯ ಮಗ, ಗಂಗಿರೆಡ್ಡಿಯು ಶನಿಮಹಾತ್ಮೆ ಕಥೆ ಹೇಳುವುದನ್ನು ರೆಕಾರ್ಡ್ ಮಾಡಿಕೊಂಡು ಯುಟ್ಯೂಬಿನಲ್ಲಿ ಬಿಟ್ಟರೆ ಬಹಳ ಪ್ರಸಿದ್ಧಿಯಾಗುವುದಾಗಿ ತಿಳಿಸಿದ್ದ. ಅದನ್ನೂ ಒಂದು ಕೈ ನೋಡಿಯೇಬಿಡೋಣ ಎಂದುಕೊಂಡ. ನಂತರ ತಲೆಯನ್ನು ಮೇಲಕ್ಕೆ ಎತ್ತಿ ಯಾರಿಗೆ ಯಾರು ಶನಿಯೋ ಯಾವ ಮಾತು ಯಾರಿಗೆ ಪೀಡೆಯೋ ಎಂದು ಯೋಚಿಸುತ್ತಾ 'ಶನಿಯೇ ನಿನ್ನಾ ಮಹಿಮೆಯನ್ನೂ ಹೇಳುವಾಕೇ ಆಗೋದಿಲ್ಲಾ... ನಿನ್ನ ಮಹಿಮೆ ನೀನೇ ಬಲ್ಲೇಯೂ... ಓ ಶನಿರಾಯ' ಹೀಗೆ ಮೆಲ್ಲಗೆ ಹಾಡುತ್ತಾ ಕಣ್ಣುಮುಚ್ಚಿದ.

ಮಾರನೆಯ ದಿನ ಬೆಳಗ್ಗೆ ದೇವರೆಡ್ಡಿಯ ಹೆಂಡತಿ ಹಚ್ಚಿದ್ದ ದೀಪಕ್ಕೆ ಇಬ್ಬರೂ ಕೈಮುಗಿದು ಶುಭ್ರವಾದ ಬಟ್ಟೆ ಧರಿಸಿ ಹೊರನಡೆದರು. ದೇವರೆಡ್ಡಿ ತಮ್ಮನನ್ನು ತನ್ನ ಗಾಡಿಯ ಮೇಲೆ ಕೂರಿಸಿಕೊಂಡು ಸೀದಾ ಪಟ್ಟಣಕ್ಕೆ ಕರೆದುಕೊಂಡು ಹೋದ. ಅಲ್ಲಿ ಯಾವುದೋ ಒಂದು ಗಲ್ಲಿಯಲ್ಲಿದ್ದ ಸಣ್ಣ ಮನೆಯ ಮುಂದೆ ನಿಲ್ಲಿಸಿದ. ಅದರ ಎದುರಿಗೆ 'ರಾಶಿಫಲ ಜ್ಯೋತಿಷ್ಯಾಲಯ' ಎಂದು ಬರೆದಿತ್ತು. ಬಾಗಿಲು ತೆರೆದೇ ಇತ್ತು. ಇಬ್ಬರೂ ಒಳಗೆ ನಡೆದರು. ವಿಚಿತ್ರವಾದ ವಾಸನೆ ಮೂಗಿಗೆ ಬಡಿಯುತು. ಧೂಪದ್ದೋ ಊದುಕಡ್ಡಿಯದ್ದೋ ಕರ್ಪೂರದ್ದೋ, ನಶೆ ಗುಳಿಗೆಯದ್ದೋ ಅಥವಾ ಯಾವುದಾದರು ಪರದೇಶೀ ಹಣೆಪಟ್ಟಿ ಹೊತ್ತ ಸುಗಂಧ ದ್ರವ್ಯದ್ದೋ... ಒಂದೂ ತಿಳಿಯದ ಗೋಜಲಿನ ವಾಸನೆ. ಬೆಳಕೂ ಅಷ್ಟೆ, ಐದಾರು ಬಣ್ಣದ ಬಲ್ಬುಗಳು ಉರಿಯುತ್ತಿದ್ದವಾದ್ದರಿಂದ ವಿಚಿತ್ರವಾಗಿ ಕಂಡಿತು. ಒಳಗೆ ನಡೆದವರೆ ತಮ್ಮ ಎದುರಿಗಿರುವ ವ್ಯಕ್ತಿಯ ಮುಂದೆ ಇಬ್ಬರೂ ಕುಳಿತರು. ದೇವರೆಡ್ಡಿ ಮುಗುಳ್ನಗುತ್ತಾ ಆ ವ್ಯಕ್ತಿಯ ಕೈಕುಲುಕಿದ. ಗಂಗಿರೆಡ್ಡಿ ಅವನ ಕಡೆಗೇ ವಿಚಿತ್ರವಾಗಿ ನೋಡತೊಡಗಿದ. ಕೈಯಲ್ಲಿರುವ ಅಷ್ಟೂ ಬೆರಳುಗಳಲ್ಲಿ ಬಗೆಬಗೆಯ ವಜ್ರಗಳನ್ನು ಹೊತ್ತ ಉಂಗುರಗಳು ಹೊಳೆಯುತ್ತಲಿದ್ದವು. ಕತ್ತಿನಿಂದ ಇಳಿದು ಭಾರದಲ್ಲಿ ಎದೆಯ ಮೇಲೆ ನೇತಾಡುತ್ತಿರುವ ಚಿನ್ನದ ಸರ ಎರಡು ಬೆರಳುಗಳ ಗಾತ್ರಕ್ಕೆ ದಪ್ಪನಾಗಿತ್ತು. ಹಣೆಯ ಮೇಲೆ ವಿಶಾಲವಾದ ಕುಂಕುಮ ಮತ್ತು ಅಡ್ಡಡ್ಡ ಎಳೆದಿರುವ ವಿಭೂತಿಯ ನಾಮ. ಅವನು ತೊಟ್ಟಿರುವ ಬಟ್ಟೆಯೂ ರೇಶಿಮೆಯದ್ದಾದ್ದರಿಂದ ಬಲ್ಬಿನ ಬೆಳಕಿಗೆ ಅವೂ ಹೊಳೆಯುತ್ತಿದ್ದವು.

ದೇವರೆಡ್ಡಿ ಆ ವ್ಯಕ್ತಿಗೆ ಗಂಗಿರೆಡ್ಡಿಯನ್ನು ಪರಿಚಯ ಮಾಡಿಕೊಟ್ಟ. ನಂತರ ಅವನಿಗೆ ಮದುವೆಯಾಗದಿರುವ ವಿಷಯ, ವಯಸ್ಸು ಮತ್ತು ಅವನು ಚಿಕ್ಕಂದಿನಿಂದಲೂ ಶನಿಮಹಾತ್ಮೆಕಥೆಯನ್ನು ಪಾರಾಯಣ ಮಾಡುವುದರಲ್ಲಿ ನಿಪುಣನಾಗಿರುವುದನ್ನು ತಿಳಿಸಿದ. ಗಂಗಿರೆಡ್ಡಿಗೆ ದೇವರೆಡ್ಡಿ ತನ್ನ ಬಗ್ಗೆ ಹಾಗೆ ಹೇಳಿದ್ದು ಹೆಮ್ಮೆಯೆನಿಸಿತು. ಅಷ್ಟರಲ್ಲಿ ಆ ವ್ಯಕ್ತಿ ಗಂಗಿರೆಡ್ಡಿಯ ಜನ್ಮ ನಕ್ಷತ್ರ,